ಬಿದುರಿನ ಕೊಳಲು, ಎಲ್ಲಕ್ಕೂ ಹೆಚ್ಚಾಗಿ ಕೊರಳಿಗೆ ಹಗ್ಗ ಹಾಕಿ ಕಟ್ಟಿದ ಮೂರು ಕುರಿಗಳು ಮತ್ತೊಂದು ಕೈಯಲ್ಲಿ – ಅವನ ವೇಷ ವಿಶೇಷವಾಗಿತ್ತು. ಅಪರಿಚಿತನ ವಶಕ್ಕೆ ಸಿಕ್ಕ ಆ ಕುರಿಗಳು ಒಂದೇ ಸವನೆ "ಮ್ಯಾ..." ಎಂದು ಅರಚುತ್ತಿದ್ದವು. ಅವನ್ನು ಎಲ್ಲಿಂದ ಹಿಡಿದುಕೊಂಡು ಹೇಗೆ ಕರೆತಂದನೋ ಆ ಭಗವಂತನೇ ಬಲ್ಲ. ದಾರಿಯಲ್ಲಿ ಹೋಗುತ್ತಿದ್ದವರು, ಆಫೀಸಿನ ಇತರ ಸಹೋದ್ಯೋಗಿಗಳು ಅವನ ಸುತ್ತ ಗುಂಪುಗೂಡಿದ್ದರು.

"ಇದೇನ್ರಿ ಅವತಾರ?" ಎಂದು ನಾನು ಬೆರಗಾಗಿ ಕೇಳಿದೆ.

"ನಮ್ಮಪ್ಪ ಕುರಿ ಕಾಯೋನು ಸಾರ್... ಥೇಟ್ ಹಿಂಗೇ ಕುರಿ ಕಾಯೋಕೆ ಹೋಗ್ತಾ ಇದ್ದ" ಎಂದು ಯಾವುದೇ ಸಂಕೋಚವಿಲ್ಲದಂತೆ ಹೇಳಿದ.

"ಎಥ್ನಿಕ್ ಡೇಗೆ ಈ ವೇಷ ಯಾಕೋ ವಿಪರೀತ ಆಯ್ತಲ್ಲ ಕಣ್ರೀ..." ಎಂದು ನಾನು ಬಡಬಡಿಸಿದೆ.

"ನೀವು ನಿಮ್ಮಪ್ಪನ ತರಹ ನಾಮ ಮುದ್ರೆ ಹಾಕ್ಕೊಂಡು ಬಂದಿದೀರ, ನಾನು ನಮ್ಮಪ್ಪನ ತರಹ ಕುರಿ ಹಿಡಕೊಂಡು ಬಂದೀನಿ" ಎಂದು ಮುಲಾಜಿಲ್ಲದೆ ಹೇಳಿದ. ನನಗೆ ಬಾಯಿ ಒಣಗಿತು.

ಅಷ್ಟರಲ್ಲಿ ಸೆಕ್ಯೂರಿಟಿಯವನು "ಈತನನ್ನ ಒಳಗೆ ಬಿಡಬೇಕೇನು ಸಾರ್?" ಎಂದು ನಿಜವಾದ ಸಮಸ್ಯೆಯನ್ನು ಮುಂದಿಟ್ಟ.

"ಕುರಿಗಳನ್ನ ಹೊರಗೆ ಕಟ್ಟಿ ಹಾಕಿ, ನೀವು ಮಾತ್ರ ಆಫೀಸಿನ ಒಳಗೆ ಬನ್ನಿ" ಎಂದು ಸಲಹೆ ಕೊಟ್ಟೆ. ವೆಂಕಯ್ಯ ಅದನ್ನು ಒಪ್ಪಲಿಲ್ಲ.

"ಕುರಿ ಇಲ್ಲದೆ ಕುರುಬ ಹೆಂಗೆ ಒಳಗೆ ಬರ್ತಾನೆ ಸಾರ್? ಬೀದಿಯಲ್ಲಿ ತೋಳಗಳು ಬಂದು ಕುರಿಗಳನ್ನ ಹಿಡಿದು ಬಿಟ್ರೆ ನನ್ನ ಗತಿ ಏನು?" ಎಂದು ಕೈಯಲ್ಲಿನ ಕೊಡಲಿಯನ್ನು ಝಳಪಿಸಿ ಕೇಳಿದ.

"ವೆಂಕಯ್ಯ, ತಲೆಹರಟೆ ಮಾಡಬೇಡ... ಕುರಿಗಳನ್ನ ಹೆಂಗೆ ಆಫೀಸಿನಾಗೆ ಬಿಡೋಕೆ ಆಗುತ್ತೆ? ಅದು ಕಂಪೆನಿಯ ನಿಯಮಕ್ಕೆ ಒಗ್ಗಲ್ಲ."

"ನಾಮ ಮುದ್ರೆಗಳು ಆಫೀಸಿನೊಳಗೆ ಬರೋದಾದ್ರೆ, ಕುರಿಗಳೂ ಬರಬೋದು ಬಿಡಿ ಸಾರ್..." ಎಂದ. ಸುತ್ತ ನೆರೆದಿದ್ದ ಸಹೋದ್ಯೋಗಿಗಳು "ಎಸ್ ಎಸ್" ಎಂದು ಅವನಿಗೆ ಇನ್ನಷ್ಟು ಉತ್ತೇಜನ ನೀಡಿದರು.

"ಅದು ಕಂಪೆನಿಯ ನಿಯಮಕ್ಕೆ ಧಕ್ಕೆ ತರುತ್ತೆ ಕಣ್ರೀ..."

"ಅವಶ್ಯಕತೆ ಇದ್ದಾಗ ನಿಯಮಗಳನ್ನ ಸಡಿಲ ಮಾಡಬೇಕು ಅಲ್ವಾ ಸಾರ್?"

ಇವನ ಜೊತೆ ಎಂತಹ ವಾದ ಎಂದು ನನಗೆ ಸಿಟ್ಟು ಬರುತ್ತಿತ್ತು. ಆದರೂ ಬೆಣ್ಣೆಯಲ್ಲಿನ ಕೂದಲನ್ನು ನಾಜೂಕಾಗಿ ತೆಗೆಯುವಂತೆ ಸಂದರ್ಭವನ್ನು ಎದುರಿಸಬೇಕಾಗಿತ್ತು. ಆ ಕಾರಣಕ್ಕಾಗಿ ಒಂದು ಸಲಹೆಯನ್ನು ನೀಡಿದೆ. ಕುರಿಗಳು ಕಂಪೆನಿಯ ಕಾಂಪೌಂಡಿನೊಳಕ್ಕೆ ಅಡ್ಡಾಡಿಕೊಂಡಿರಲಿ. ಹೇಗೂ ಸಾಕಷ್ಟು ಹಸಿರು ಗಿಡಗಳನ್ನು ಬೆಳೆಸಿದ್ದೇವೆ. ಅವನ್ನು ತಿಂದುಕೊಂಡು ಹಾಯಾಗಿ ಸುತ್ತಾಡಲಿ. ವೆಂಕಯ್ಯ ಮಾತ್ರ ಕಚೇರಿಯ ಕಟ್ಟಡದ ಒಳಕ್ಕೆ ಬರಲಿ ಎಂದು ಒಪ್ಪಿಸಿದೆ. ಎಲ್ಲರೂ ಸಲಹೆಗೆ ಸಮ್ಮತಿ ಸೂಚಿಸಿದರು.

"ಸಾರ್, ಕೈಯಾಗೆ ವೆಪನ್ ಹಿಡಕೊಂಡು ಬಂದಿದಾನೆ... ಏನು ಮಾಡೋದು?" ಎಂದು ಸೆಕ್ಯೂರಿಟಿಯವನು ಕೇಳಿದ. ವೆಂಕಯ್ಯ ಮತ್ತೊಮ್ಮೆ ಕೊಡಲಿಯನ್ನು ಝಳಪಿಸಿ, "ಇದಕ್ಕೆ ವೆಪನ್ ಅನ್ನಬೇಡ. ನಮ್ಮಪ್ಪಗೆ ಅವಮಾನ ಆಗುತ್ತೆ" ಎಂದು ಸೆಕ್ಯೂರಿಟಿಯವನನ್ನು ಬೈಯ್ದ.